ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಬುಧವಾರ ದಿನಾಂಕ ೨೦ನೇ ಮಾರ್ಚ್ ೧೯೮೫ ಫಾಲ್ಗುಣ ೨೯, ೧೯೦೬ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ಒಂಭತ್ತು ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠದಲ್ಲಿ ಉಪಸ್ಥಿತರಿದ್ದರು.

ಗಮನ ಸೆಳೆಯುವ ಸೂಚನೆ

ತುಂಗಭದ್ರ ಆಣೆಕಟ್ಟಿನ ಬಳಿ ಇರುವ ಒಂಕಾಯಿ ಕ್ಯಾಂಪಿನಲ್ಲಿ ಸಂಭವಿಸಿದ ಬೆಂಕಿ ಅನಾಹುತ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ನಾನು ತುಂಗಭದ್ರಾ ಆಣೆಕಟ್ಟಿನ ಬಳಿ ಇರುವ ಒಂಕಾಯಿ ಕ್ಯಾಂಪಿನಲ್ಲಿ ಸಂಭವಿಸಿದ ಬೆಂಕಿ ಅನಾಹುತದ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಯವರು)

ದಿನಾಂಕ ೧೧–೩–೮೫ರಂದು ಮಧ್ಯಾಹ್ನ ೨ ಗಂಟೆಯ ನಂತರ ಸಂಭವಿಸಿದ ಬೆಂಕಿ ಅನಾಹುತದಲ್ಲಿ ೨೫೨ ಗುಡಿಸಲುಗಳು ಪೂರ್ಣವಾಗಿ ಭಸ್ಮವಾದವೆಂದು ವರದಿಯಾಗಿದೆ. ಆ ಪ್ರದೇಶದಲ್ಲಿ ಗಾಳಿ ಅತಿಯಾದ ವೇಗದಲ್ಲಿ ಬೀಸುತ್ತಿದ್ದು ಬೆಂಕಿಯು ಬೇಗನೆ ಹರಡಲು ಕಾರಣವಾಯಿತೆಂದು ತಿಳಿದು ಬಂದಿದೆ. ಸರಕಾರಿ ಜಮೀನಿನ ಮೇಲೆ ಸ್ಥಾಪಿತವಾಗಿದ್ದ ಈ ಕಾಲೋನಿಯಲ್ಲಿ ಬಹುತೇಕ ತುಂಗಭದ್ರಾ ಬೋರ್ಡ್ ಹಾಗೂ ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್ಸ್ ಈ ಸಂಸ್ಥೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ವಾಸ ಮಾಡುತ್ತಿದ್ದರೆಂಬುದು ತಿಳಿದ ತಕ್ಷಣ ಹತ್ತಿರದಲ್ಲಿದ್ದ ಶಾಲೆಯೊಂದರಲ್ಲಿ ಪರಿಹಾರ ಕೇಂದ್ರ ಒಂದನ್ನು ಸ್ಥಾಪಿಸಲಾಯಿತು. ಖಾಸಗಿ ಸಂಸ್ಥೆಗಳು ಹಾಗೂ ಇತರರ ಸಹಾಯದಿಂದ ಬೆಂಕಿ ಅನಾಹುತಕ್ಕೆ ಒಳಗಾದವರಿಗೆ ಆಹಾರದ ಸರಬರಾಜು ಮಾಡಲಾಯಿತು. ಸ್ಥಳದಲ್ಲಿಯೇ ಬಳ್ಳಾರಿಯ ಜಿಲ್ಲಾಧಿಕಾರಿಗಳು ತಲಾ ೩೦೦ ರೂಪಾಯಿ ಪರಿಹಾರವನ್ನು ನೀಡಿದರು.

೨. ೧೨ನೇ ತಾರೀಖು ಸುಮಾರು ೧೦.೩೦ ಗಂಟೆಯಲ್ಲಿ ಪ್ರಾರಂಭವಾದ ಬೆಂಕಿ ಅವಾಹುತದಲ್ಲಿ ೧೩೮ ಗುಡಿಸಲುಗಳು ಭಸ್ಮವಾದವು. ಸಂಡೂರು, ಹೊಸಪೇಟೆ ಮತ್ತು ಬಳ್ಳಾರಿಯಿಂದ ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಧಾವಿಸಿ ಹಲವಾರು ಗಂಟೆಗಳ ಕಾಲ ಪ್ರಯತ್ನಪಟ್ಟು ಬೆಂಕಿಯನ್ನು ಆರಿಸಿದವು. ಈ ಎರಡು ಘಟನೆಗಳಲ್ಲಿ ಸಂಭವಿಸಿದ ನಷ್ಟದ ಮೊತ್ತ ಮೊದಲ ನೋಟಕ್ಕೆ ೭ ಲಕ್ಷ ಎಂದು ಅಂದಾಜು ಮಾಡಲಾಗಿದೆ. ಕೆಲವು ಜಾನುವಾರುಗಳನ್ನು ಹೊರತು ಯಾರಿಗೂ ಪ್ರಾಣ ಹಾನಿ ಆಗಿಲ್ಲ. ಒಟ್ಟು ಸಂಭವಿಸಿರಬಹುದಾದ ನಷ್ಟದ ಮೊತ್ತ ಇನ್ನೂ ನಿಖರವಾಗಿ ತಿಳಿದು ಬಂದಿಲ್ಲ. ಈ ಬಗ್ಗೆ ತುಂಗಭದ್ರಾ ಡ್ಯಾಂ ಆರಕ್ಷಕ ಠಾಣೆಯಲ್ಲಿ ಗುನ್ನೆ ನಂ. ೧೧:೮೫ರಲ್ಲಿ ಮೊಖದ್ದಮೆ ದಾಖಲು ಮಾಡಿಕೊಳ್ಳಲಾಗಿದೆ. ಬೆಂಕಿ ಅನಾಹುತದ ಕಾರಣದ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ. ಸ್ಥಳೀಯ ಸಂಸ್ಥೆಗಳ ಸಹಾಯದಿಂದ ಪರಿಹಾರ ಕೇಂದ್ರಗಳು ನಡೆಯುತ್ತಿವೆ. ಬಳ್ಳಾರಿ ಜಿಲ್ಲಾಧಿಕಾರಿಗಳು ಈ ಅನಾಹುತದಿಂದ ನಿರಾಶ್ರಿತರಾದ ಸುಮಾರು ೨೦೦೦ಕ್ಕೂ ಮಿಕ್ಕಿದ ಜನರ ಪುನರ್ ವಸತಿಗಾಗಿ ಯೋಜನೆ ಒಂದನ್ನು ತಯಾರಿಸುತ್ತಿದ್ದಾರೆಂದು ತಿಳಿದು ಬಂದಿದೆ, ಸ್ಥಳದಲ್ಲಿ ವಿಶೇಷ ಪೋಲೀಸ್ ಗಸ್ತನ್ನು ಏರ್ಪಡಿಸಲಾಗಿದೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ತುಂಗಭದ್ರ ವ್ಯಾಲಿಯಲ್‌ನಲ್ಲಿ ಸುಮಾರು ೨೦೦೦ ಜನ ಬೆಂಕಿ ಅನಾಹುತದಲ್ಲಿ ತೊಂದರೆಗೆ ಒಳಗಾಗಿದ್ದಾರೆಂದು ಹೇಳಿದ್ದಾರೆ. ನನಗೆ ಗೊತ್ತಿದ್ದಂತೆ ಅನಾಹುತಕ್ಕೆ ಈಡಾಗಿರುವವರು ೬೫೦೦ಜನಕ್ಕೂ ಮೇಲ್ಪಟ್ಟಿದಾರೆ. ಈ ತಿಂಗಳು ೧೧ನೇ

ಕಾರೀಕಾಂ ಈ ಘಟನೆ ಸಂಭವಿಸಿದ್ದು ಇವತ್ತಿಗೆ ೯ ದಿವಸಗಳಾಗಿದೆ. ತೊಂದರೆಗೆ ಒಳಗಾದವರು ಬೀದಿಯಲ್ಲಿದ್ದಾರೆ, ಸರ್ಕಾರದವರು ಗಂಜಿ ಕೇಂದ್ರ ಪ್ರಾರಂಭ ಮಾಡಿದ್ದರೂ ಅಲ್ಲಿ ೧೦೦೦ ಜನಕ್ಕೆ ಗಂಜಿ ಸಿಗುವುದೂ ಕಷ್ಟವಾಗಿದೆ. ಇದರ ಹಿಂದೆ ದುಷ್ಟ ಶಕ್ತಿಗಳ ಕೈವಾಡ ಇದ್ದು, ಸುತ್ತಮುತ್ತಲಿನ ಜಿಲ್ಲೆಯಲ್ಲಿ ಭೀತಿ ವಾತಾವರಣ ತಂಬಿದೆ. ಚುನಾವಣೆಯ ಫಲಿತಾಂಶ ಹೊರಬಿದ್ದ ಕೂಡಲೇ ಇಂಥ ಒಂದು ಘಟನೆ ನಡೆದು ಹೋಗಿದೆ. ನಾನು ಹರಿಜನ ಕೇರಿಯಲ್ಲಿ ಹೋಗಿ ಒಬ್ಬ ಮುದುಕಿಯನ್ನು ಭೇಟಿ ಮಾಡಿದ್ದೆ ಆಕೆಯ ಕಣ್ಣಿನಲ್ಲಿ ನೀರು ತುಂಬಿಕೊಂಡು ನನ್ನ ಮನೆಗೂ ಬೆಂಕಿ ಹಚ್ಚುತ್ತಾರೆಂದು ಸುದ್ದಿ ಗೊತ್ತಾಗಿದೆಯೆಂದು ತಿಳಿಸಿದಳು, ಪರಿಸ್ಥಿತಿ ಇಷ್ಟು ಗಂಭೀರವಾಗಿದ್ದರೂ, ಸರ್ಕಾರ ಸೂಕ್ತ ಕ್ರಮ ಕೈಗೊಂಡು. ನಿರ್ಗತಿಕರಾದವರಿಗೆ ಪುನರ್‌ವ್ಯವಸ್ಥೆಯ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದೆಯೆಂದು ನಾನು ಮತ್ತೆ ಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಡೆದಂತಹ ಘಟನೆಯ ಹಿಂದೆ ಯಾರಿದ್ದಾರೆ ಯಾವ ದುಷ್ಟಶಕ್ತಿಗಳಿವೆ ಎಂಬುದನ್ನು ಹೇಳಲಿಲ್ಲ. ವಿಚಾರಣೆ ನಡೆಯುತ್ತಿದೆ ಯೆಂದು ಮಾತ್ರ ಹೇಳಿದ್ದಾರೆ. ಯಾರ ಮೂಲಕ ವಿಚಾರಣೆ ನಡೆಸುತ್ತಿದ್ದಾರೆ ? ಯಾರು ವಿಚಾರಣೆ ನಡೆಸುತ್ತಿದ್ದಾರೆ ? ವಿಚಾರಣೆಯ ಫಲಿತಾಂಶವನ್ನು ಈ ಮನೆಯ ಮುಂದೆ ಇಡುತ್ತೀರಾ ? ಇಡುವುದಾದರೆ ಎಷ್ಟು ದಿವಸಗಳಲ್ಲಿ ಇಡುತ್ತೀರಿ ? ಮಾನ್ಯ ಸದಸ್ಯರು ಹೇಳಿದ ಹಾಗೆ ದುಷ್ಟಶಕ್ತಿಗಳು ಸೇರಿಕೊಂಡು ಚುನಾವಣೆಯ ಫಲಿತಾಂಶ ಪ್ರಕಟಣೆಯಾದ ಮೇಲೆ ಈ ರೀತಿ ಮಾಡಿದ್ದಾರೆ. ರಾಜಕೀಯ ದುರದ್ದೇಶದಿಂದ ಈ ರೀತಿ ಮಾಡಿದ್ದಾರೆ. ಯಾವಾಗ ವರದಿಯನ್ನು ಸಭೆಯ ಮುಂದೆ ಇಡುತ್ತಿರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಇನ್ನು ಎರಡನೆಯದಾಗಿ ಪರಿಹಾರವನ್ನು ಕೊಡುತ್ತಿರುವುದು ಬಹಳ ಕಡಿಮೆಯಾಗಿದೆ. ಕೊಡತಕ್ಕ ಪರಿಹಾರವನ್ನು ಉದಾರವನ್ನು ಹೆಚ್ಚು ಮಾಡಬೇಕು. ಕೊಡತಕ್ಕ ಪರಿಹಾರ ಯಾವುದಕ್ಕೂ ಸಾಲುವುದಿಲ್ಲ. ಜಾನುವಾರಗಳು ಸತ್ತರೆ ತಾವು ಕೊಡತಕ್ಕ ಪರಿಹಾರ ೨ ಸಾವಿರ ರೂಪಾಯಿಗಳು ಬಹಳ ಕಡಿಮೆಯಾಯಿತು. ಅದನ್ನು ೩ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಬೇಕು. ನಡೆದಂತಹ ಘಟನೆಯಲ್ಲಿ ಸಂಭವಿಸಿದಂತಹ ನಷ್ಟ ೭ಲಕ್ಷ ರೂಪಾಯಿಗಳು ಎಂದು ಹೇಳಿದ್ದಾರೆ ಅದಕ್ಕಿಂತ ಜಾಸ್ತಿಯಾಗಿದೆ. ಮುಕ್ಕಾಲು ಭಾಗ ಹರಿಜನ-ಗಿರಿಜನರ ಮನೆಗಳು ಸುಟ್ಟು ಹೋಗಿವೆ ಆದರೂ ಸರ್ಕಾರ ರಕ್ಷಣೆ ಕೊಡುತ್ತಾ ಇಲ್ಲ.

ಶ್ರೀ ಬಿ. ರಾಚಯ್ಯ.—ನಡೆದಂತಹ ಅನಾಹುತ ಆಕಸ್ಮಿಕವಾಗಿ ಆಗಿದೆಯೇ, ಅಥವಾ ಅದರ ಹಿಂದೆ ಯಾರಾದರೂ ಇದ್ದಾರೆಯೇ ಎಂಬುದರ ಬಗ್ಗೆ ವಿಚಾರಣೆ ನಡೆಯುತ್ತಿದೆ ಎಂದು ಹೇಳಿದ್ದೇನೆ. ವಿಚಾರಣೆ ನಡೆದ ಮೇಲೆ ವರದಿಯನ್ನು ಬೇಕಾದರೆ ತಮ್ಮ ಮುಂದೆ ಇಡೋಣ. ಪರಿಹಾರ ಕೊಡುವುದರಲ್ಲಿ ಸಾಕಷ್ಟು ಕೊಟ್ಟಿಲ್ಲವೆಂದು ಹೇಳಿದ್ದೀರಿ. ಪವ್ಮೆ ರೆವಿನ್ಯೂ ಆಕ್ಟ್ ಪ್ರಕಾರ ಜಿಲ್ಲಾಧಿಕಾರಿಗಳಿಗೆ. ಉಪ-ವಿಭಾಗಾಧಿಕಾರಿಗಳಿಗೆ ಮತ್ತು ತಹಶೀಲ್ದಾರ್‌ರವರಿಗೆ ಇಂತಿಂಥ ನಷ್ಟವಾದರೆ ಇಷ್ಟಿಷ್ಟು ಪರಿಹಾರ ಕೊಡಬೇಕು ಎನ್ನುವ ಕಾನೂನು ಇದೆ. ಮೊದಲು ಜಿಲ್ಲಾಧಿಕಾರಿಗಳು ಪ್ರತಿ ಕುಟುಂಬಕ್ಕೆ ೩೦೦ರೂಪಾಯಿಗಳಂತೆ ಪರಿಹಾರವನ್ನು ಕೊಡಲಾಗಿದೆ ಎನ್ನುವ ವರದಿ ಬಂದಿದೆ. ಕೊಟ್ಟಂತಹ ಪರಿಹಾರ ಸಾಕಾಗುವುದಿಲ್ಲ ಅಂದರೆ ಸರ್ಕಾರಕ್ಕೆ ದೀರ್ಘವಾದ ವರದಿ ಬಂದ ಮೇಲೆ ಪರಿಹಾರವನ್ನು ಕೊಡುತ್ತೇವೆ ಗಂಜಿ ಕೇಂದ್ರಗಳನ್ನು ತೆರೆಯಲಾಗಿದೆ, ಸ್ಕೂಲ್ ಕಟ್ಟಡಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಕೆಲವು ಶೆಡ್‌ಗಳನ್ನು ಹಾಕಿ ವಸತಿ ಒದಗಿಸಿ ಕೊಡಬೇಕೆಂದು ಈಗಾಗಲೇ ಸೂಚನೆ ಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಪರಿಹಾರ ಕೊಡುವುದರಲ್ಲಿ ಬಹಳ ದಿವಸಗಳಾಗಿವೆ. ದೀರ್ಘವಾಗಿ ವರದಿ ಬರುವುದಕ್ಕೆ ಆರು ತಿಂಗಳು ಆಗುತ್ತದೆ. ಅಲ್ಲಿಯವರಿಗೆ ಮನುಷ್ಯರು ಸಾಯುತ್ತಾರೆ. ಜಾನುವಾರಗಳು ಸಾಯುತ್ತವೆ, ಅದ್ದರಿಂದ ಎರಡು ಮೂರು ದಿವಸಗಳಿಂದ ಪರಿಹಾರ ಕೊಡುವವ್ಯವಸ್ಥೆ ಮಾಡಿ.

ಶ್ರೀ ಬಿ. ರಾಚಯ್ಯ.—ಬೆಂಕಿ ಅನಾಹುತ ನಡೆಸಿದಂತಹ ಸಂದರ್ಭದಲ್ಲಿ ಇದರ ಹಿಂದೆ ಯಾರ್ಯಾರೋ ಇದ್ದಾರೆಂಬುದನ್ನು ಗೃಹ ಇಲಾಖೆ ಮುಖಾಂತರ ತನಿಖೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಪರಿಹಾರ ಕೊಡತಕ್ಕದ್ದರಲ್ಲಿ ನನ್ನ ಸಹೋದ್ಯೋಗಿಯಾದ ಬೊಮ್ಮಾಯಿಯವರು ಇದಕ್ಕೆ ಉತ್ತರ ಕೊಡಬೇಕಾಗಿದೆ.

ಶ್ರೀ ಎಂ ಎಸ್. ಕೃಷ್ಣನ್.—ಈ ರೀತಿ ಜಾರಿಕೊಳ್ಳುವುದು ಬೇಡ. ಪರಿಹಾರ ಕೊಡುವ ವಿಚಾರದಲ್ಲಿ ನೀವು ಆಪರು ವಿಚಾರಮಾಡಿ ಬೇಗ ಕೊಡಿಸುವ ವ್ಯವಸ್ಥೆಮಾಡಿ. ನೀವು ದೀಘವಾಗಿ ಅಳವಾಗಿ ತನಿಖೆಮಾಡಿ ವಿವರ ತರಿಸಿಕೊಡು ಕೊಡುವುದರಲ್ಲಿ ಗುಡಿಸಲುಗಳಲ್ಲಿ ವಾಸಿಸತಕ್ಕ ಜನ ನೀವು ಕೊಡುವುದರೊಳಗೆ ಏನಾಗಬತ್ತಾರೆ ?

ಶ್ರೀ ಬಿ. ರಾಚಯ್ಯ.—ಪೂಸ್ಯ ಕೃಷ್ಣನ್‌ರವರ ಅನುಕಂಪ ವಿನಿದೆ ಅದನ್ನು ನಾನು ಆಳವಾಗಿ ತಿಳಿದುಕೊಂಡಿದ್ದೇನೆ. ಎಷ್ಟು ಶೀರ್ಘವಾಗಿ ಎಷ್ಟು ಪ್ರಮಾಣದಲ್ಲಿ ಪರಿಹಾರವನ್ನು ಕೊಡಬೇಕ್ಕುವುದನ್ನು ಮಾಹಿತಿ ಬಂದಮೇಲೆ ಅದರ ಪ್ರಕಾರ ಉದಾರವಾಗಿ ಕೊಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಅಧ್ಯಕ್ಷರು.—ಈಗ ನಿಯಮ ೩೩೪ರ ಪ್ರಕಾರ ಸಭೆಯ ಮುಂದೆ ತರುವ ವಿಚಾರ. ೧೪ನೆ ದಿವಸ ನೀವು ೧೭ ವಿಚಾರವನ್ನು ಇಟ್ಟಿದ್ದೀರಿ. ಎಲ್ಲಾ ವಿಷಯಗಳಿಗೂ ಅವಕಾಶ ಕೊಡಬೇಕಾಗಿದೆ. ಎಷ್ಟು ವಿಚಾರಗಳು ಇವೆಯೋ ಅಷ್ಟನ್ನು ಸಭೆಯ ಮುಂದೆ ಇಡತಕ್ಕ ಅವಕಾಶ ಮಾಡಿಕೊಡುತ್ತೇವೆ. ಈ ಬಗ್ಗೆ ಹಿಂದಿನ ಅಧ್ಯಕ್ಷರು ಸಾಕಷ್ಟು ರೂಲಿಂಗ್ ಕೊಟ್ಟಿದ್ದಾರೆ. ನಾನು ಈಗ ಹೆಚ್ಚಾಗಿ ಹೊಸ ಸದಸ್ಯರು ಇರುವುದರಿಂದ ಕೆಲವು ಅಬಸರ್ವೇಷನ್ಸ್ ಹೇಳುತ್ತಿದ್ದೇನೆ. ಅದು ಈ ರೀತಿ ಇದೆ.

I want to make it clear what exactly we have to follow under rule 334.

The concept of the Rule of Procedure and Conduct of Business is not new to this House. There is an impression that this rule has been newly added to the revised rules of procedure. It is not so. Before the revised rules were adopted by the House. the rule number was 312. This rule has been adopted in toto from Lok Sabha Rules. The corresponding Lok Sabha Rule is 377.

As matters were being raised in the House immediately after question hour without any notice, so as to maintain the high traditions set up by our House, a request was canassed in 1972 that the matters which suddenly arise on the day of the sittings of the House. could be brought to the notice of the House under Rule 312 (now 334) This procedure was resorted to so that the House could avoid what is commonly called 'Zero Hour' It may be brought to the notice of the House that there is no such thing as 'Zero Hour' either in Lok-Sabha Rules or in any or the States in our country.

In Lok Sabha. the matters to be raised under Rule 377 were limited to queuiions of Constitutional or legal importance. However, from 4th Session of the Sixth Lok Sabha (1978) matters of urgent public importance were allowed to be raised.

It may be emphasised here that although matters are raised on the floor of the House. there is no corresponding obligation on the part of the Minister to reply, however the matter be important it may be added here thatk even the concerned Minister need not be present at the time when matters are raised.

The following condition are prevailing in Lok Sabha.

1. It is a condition precedent that the matter could be raised only aftee Spaker gives consent to raise the issue.